**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 811/2025**

**ಸಾಕ್ಷಿಃ ಸಿಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

ಸಾಕ್ಷಿದಾರನ ಹೆಸರು : ಪ್ರದೀಪ

ತಂದೆಯ ಹೆಸರು : ಮಾರುತಿ ಮೇತ್ರಿ

ವಯಸ್ಸು : 34 ವರ್ಷ

ಉದ್ಯೋಗ : ಪೇದೆ ,ಅಬಕಾರಿ ಕಚೇರಿ

ವಾಸ್ತವ್ಯ : ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 30/10/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 29.04.2021 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿ. 21.11.2023 ರಂದು ಚಾಸಾ 1 ರವರು , ನಾನು ಹಾಗೂ ಚಾಸಾ 5 ರವರು ಸರಕಾರಿ ವಾಹನ ಸಂಖ್ಯೆ ಕೆಎ 47 ಜಿ 0042 ರಲ್ಲಿ ಮಾರ್ಗ ಸಂಖ್ಯೆ 6 ರಲ್ಲಿ ಬರುವ ಉತ್ತರಕೊಪ್ಪದ ಗ್ರಾಮದ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 7.30 ಗಂಟೆಗೆ ಚಾಸಾ 1 ರವರಿಗೆ ಬಂದ ಮಾಹಿತಿಯಂತೆ ಬುದಿಯಾ ಮರಾಟಿಗೆ ಸೇರಿದ ಮನೆ ಹಾಗೂ ತೋಟದಲ್ಲಿ ಕಳ್ಳಬಟ್ಟಿ ಸರಾಯಿ ತಯಾರಿಸಿ ದಾಸ್ತಾನು ಇಟ್ಟು ಮಾರಾಟ ಮಾಡುತ್ತಾರೆಂದು ಬಂದ ಮಾಹಿತಿಯಂತೆ ನಾವು ಸ್ಥಳಕ್ಕೆ ಹೋದಾಗ ಚಾಸಾ 1 ರವರು ಶೋಧನಾ ಸುಮುಚ್ಚಿತ್ತ ಆದಾರ ತಯಾರಿಸಿ ಮನೆಯ ಮುಂದೆ ಇರುವ ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಪಂಚರಾಗಲು ಕೇಳಿದಾಗ ಅವರು ಒಪ್ಪಿದ್ದು ಅವರು ಮನೆಯ ಸದರಿ ಮುಂದೆ ಬಂದಿದ್ದು ನಾವು ಗುನ್ನಾ ಸ್ಥಳದಲ್ಲಿ ಇದ್ದ ವ್ಯಕ್ತಿಗೆ ಹೆಸರು ಕೇಳಿದಾಗ ಅವನು ಬುದಿಯಾ ಎಂದು ಹೇಳಿದ್ದು ಪರಸ್ಪರ ಅಂಗಶೋಧನೆ ಮಾಡಿ ಶೋಧನೆ ಪ್ರಾರಂಬಿಸಿದಾಗ ಮನೆಯ ಉತ್ತರಕ್ಕೆ ಇರುವ ಬಚ್ಚಲು ಕೋಣೆಯಲ್ಲಿ 20 ಲೀ ಸಾಮರ್ಥ್ಯದ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಲ್ಲಿ 20 ಲೀ ಬೆಲ್ಲದ ಕೊಳೆ ಕಂಡುಬಂದಿದ್ದು ಇರುತ್ತದೆ. ಶೊಧನೆ ಮುಂದುವರೆಸಿದಾಗ ಮನೆಯ ಹಿಂದಿನ ಬಾಳೆ ತೋಟದಲ್ಲಿ ಹೊಂಡ ತೆಗೆದಿದ್ದು ಅದರಲ್ಲಿ 2 ಪ್ಲಾಸ್ಟಿಕ್ ಕ್ಯಾನ್ ಇದ್ದು 1 ಕಾನಿನಲ್ಲಿ 25 ಲೀ ಕಳ್ಳಬಟ್ಟಿ ಸರಾಯಿ ಇತ್ತು , ಇನ್ನೊಂದು ಖಾಲಿ ಪ್ಲಾಸ್ಟೀಕ್ ಕ್ಯಾನ ಹಾಗೂ 2 ಅಲ್ಯೂಮಿನಿಯಂ ಪಾತ್ರೆ ಇತ್ತು. ಪತ್ತೆಯಾದ ಸ್ವತ್ತುಗಳಲ್ಲಿ 500 ಎಮ್ ಎಲ್ ನ ಪ್ಲಾಸ್ಟಿಕ್ 2 ಬಾಟಲಿಯಲ್ಲಿ ತಲಾ 500 ಎಮ್ ಎಲ್ ನಂತೆ ಒಟ್ಟು 1 ಲೀ ಕಳ್ಳಬಟ್ಟಿ ಸರಾಯಿಯನ್ನು ರಾಸಾಯನಿಕ ಪರೀಕ್ಷೆಗೆ ಮಾಧರಿಗಾಗಿ ತೆಗೆದು ಅದಕ್ಕೆ ಪಂಚರ ಸಹಿ ಇರುವ ಮಾಧರಿ ಚೀಟಿ ಅಂಟಿಸಿ, ಮಾಧರಿ

ಮೊಹರನ್ನು ಸ್ಥಳದಲ್ಲಿ ತಯಾರಿಸಲಾಯಿತು. ಕೃತ್ಯ ನಡೆದ ಸ್ಥಳದ ಪೂರ್ವಕ್ಕೆ ಖಾಲಿ ಅಂಗಳ , ಪಶ್ಚಿಮಕ್ಕೆ ತೋಟ, ಉತ್ತರಕ್ಕೆ ಗದ್ದೆ , ದಕ್ಷಿಣಕ್ಕೆ ತೋಟ ಇರುತ್ತದೆ. ಪಂಚನಾಮೆಯನ್ನು ಬೆಳಿಗ್ಗೆ 8.30 ರಿಂದ 9.30 ರವರೆಗೆ ಬರೆಯಲಾಗಿತ್ತು. ಆರೋಪಿ ಮನೆ ಸಂಖ್ಯೆ 786 ಆಗಿತ್ತು. ರಾಸಾಯನಿಕ ಪರೀಕ್ಷೆಗೆ ತೆಗೆದ ಮುದ್ದೆಮಾಲನ್ನು ದಿಃ 27.11.2023 ರಂದು ಭಟ್ಕಳ ಕಚೇರಿಯಿಂದ ತೆಗೆದುಕೊಂಡು ಹೋಗಿ ಅದೇ ದಿನ ರಾಸಾಯನಿಕ ವರದಿಯನ್ನು ನೀಡಿದ್ದು ಅದನ್ನು ಚಾಸಾ 1 ರವರಿಗೆ ಒಪ್ಪಿಸಲಾಯಿತು. ನನ್ನ ಮೊಬೈಲಾದ ವಿಮೋ ವಾಯ್ 35 ಮೊಬೈಲಿನಿಂದ ಕೃತ್ಯ ನಡೆದ ಸಮಯದಲ್ಲಿ ಪೊಟೋ ತೆಗೆದು ಅದರಂತೆ ಕಲಂ 65 ಬಿ ಪ್ರಮಾಣಪತ್ರ ನೀಡಿರುತ್ತೇನೆ.

3. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 65 ಬಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲು 1 ಮತ್ತು 2 ನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಮುಂದೂಡಲಾಯಿತು.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**